**37** ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

ಸಿ.ಸಿ. ನಂ.**27369/2018**

ಫ್ರಾ.ಸಃ **1** ಚಾ.ಸಃ **1**

| | |
|---|---|
| ಸಾಕ್ಷಿದಾರರ ಹೆಸರು | ಗೀತ ರಮಣಿ |
| ತಂದೆಂಯ ಹೆಸರು | ರಮಣಿ |
| ವಯಸ್ಸು | 76 ವರ್ಷ |
| ಉದ್ಯೋಗ | ನಿವೃತ್ತ ವಿಜ್ಞಾನಿ |
| ವಿಳಾಸ | ಜಯನಗರ, ಬೆಂಗಳೂರು. |
| ಪ್ರ. ವ. ಬೋ ದಿನಾಂಕ | 11/01/2023 |

<u>ಮುಖ್ಯ ವಿಚಾರಣೆಃ ಮಾನ್ಯ ಹಿ.ಸ.ಸ. ಅ ರವರಿಂದಃ</u>

ದಿ. 01/06/2017 ರಂದು ಬೆಳಗ್ಗೆ 06.10 ಗಂಟೆ ಸಮಯದಲ್ಲಿ ನಾನು ಜಯನಗರ 14 ನೇ ಬ್ಲಾಕ್, 3 ನೇ ಕ್ರಾಸ್ ಹತ್ತಿರವಿರುವ ನಮ್ಮ ಮನೆಯ ಹತ್ತಿರ ವಾಕಿಂಗ್ ಮಾಡುತ್ತಿರುವಾಗ ಯಾರೋ ಇಬ್ಬರು ಅಸಾಮಿಗಳು ನನ್ನ ಕತ್ತಿನಲ್ಲಿದ್ದ ಸುಮಾರು 30 ಗ್ರಾಂ ತೂಕದ ಚಿನ್ನದ ಸರವನ್ನು ಕಿತ್ತುಕೊಂಡು ಬೈಕಿನಲ್ಲಿ ಹೋಗಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು, ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ದೂರು ನೀಡಿದ ನಂತರ ಪೊಲೀಸರು ಮನೆಯಹತ್ತಿರ ಬಂದು ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿ ಈಗ ಮತ್ತೊಂದು ದಾಖಲೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಘಟನೆ ನಡೆದ 3-4 ತಿಂಗಳ ನಂತರ ಪೊಲೀಸರು ನನಗೆ ಪೋನ್ ಮಾಡಿ ಕಳ್ಳತನವಾಗಿದ್ದ ಚಿನ್ನದ ಸರ ಸಿಕ್ಕಿರುವುದಾಗಿ ತಿಳಿಸಿದ್ದು, ಅದರಂತೆ ನಾನು ಠಾಣೆಗೆ ಹೋಗಿ ನನ್ನಿಂದ ಕಳ್ಳತನವಾಗಿದ್ದ ಒಂದು ಚಿನ್ನದ ಸರವನ್ನು ಪೊಲೀಸರಿಂದ ಪಡೆದುಕೊಂಡಿರುತ್ತೇನೆ. ಸದರಿ ಚಿನ್ನದ ಸರವನ್ನು ಈಗ ಪೋಟೋದಲ್ಲಿ ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ.4 ಎಂದು ಗುರುತಿಸಲಾಯಿತು. ಸರವನ್ನು ನನ್ನ ವಶಕ್ಕೆ ನೀಡಿದ ಬಗ್ಗೆ ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.5 ಎಂದು ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಪೊಲೀಸರು ನನಗೆ ಸದರಿ ಸರವನ್ನು ಕಳ್ಳತನ ಮಾಡಿದ ಆರೋಪಿಗಳನ್ನು ತೋರಿಸಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ

ಮರುಹೇಳಿಕೆ ನೀಡಿರುವುದಿಲ್ಲ. ಈಗ ನ್ಯಾಯಲಯದ ಮುಂದೆಯಿರುವ ಆರೋಪಿತರನ್ನು ಗುರುತಿಸಲು ಸಾಧ್ಯವಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಹಿ. ಸ. ಸ. ಅ ವಕೀಲರಿಂದಃ</u>

ದಿ. 15/08/2017 ರಂದು ನಾನು ಪೊಲೀಸ್ ಠಾಣೆಗೆ ಹೋಗಿದ್ದಾಗ ನಾನು ಅಲ್ಲಿ ಆರೋಪಿತರನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ ಮತ್ತು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ಸಾಕ್ಷಿಗೆ ಸಂಪೂರ್ಣವಾಗಿ ಓದಿ ಹೇಳಲಾಗಿ ಸಾಕ್ಷಿ ಅದನ್ನು ನಿರಾಕರಿಸಿದರ ಮೇರೆಗೆ ಅದನ್ನು ನಿಪಿ.6 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ